not to be printed
↓
2nd Cover

## ನೀನಾಸಮ್ ಸಂಸ್ಕೃತಿ ಶಿಬಿರ
## ಅಕ್ಟೋಬರ್ ೨೦೧೩

ಕಳೆದ ಎರಡು ದಶಕಗಳಿಗೂ ಮಿಕ್ಕು ನೀನಾಸಮ್ ಸಂಸ್ಥೆಯು ಪ್ರತಿವರ್ಷವೂ ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದ್ದು ಅದರ ೨೦೧೩ರ ಅವತರಣಿಕೆ ಇದು. ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಬಾರಿಯ ಶಿಬಿರವು 'ಸಂಪ್ರದಾಯಗಳೊಂದಿಗೆ ಸಹಬಾಳ್ವೆ' ಎಂಬ ವಿಷಯವನ್ನು ಕೇಂದ್ರೀಕರಿಸುತ್ತದೆ. ವರ್ತಮಾನದಲ್ಲಿ ಬದುಕುವ ನಾವು ಗತಕಾಲದ ಹಲವು ಬಗೆಯ ಸಂಪ್ರದಾಯಗಳ ಜೊತೆಗೆ, ಸ್ವೀಕಾರ-ವಿರೋಧಗಳೆರಡನ್ನೂ ಒಳಗೊಂಡ ಒಂದು ಸಹಬಾಳ್ವೆಯ ಸಂಬಂಧದಲ್ಲಿ ಬದುಕುತ್ತಿದ್ದು, ಅಂಥ ಸಂಪ್ರದಾಯಗಳು ಸಾಹಿತ್ಯ-ಕಲೆಗಳಿಂದ ಆರಂಭವಾಗಿ ಆಡಳಿತ-ಆರ್ಥಿಕತೆಗಳನ್ನೂ ಒಳಗೊಂಡು ಪುರಾಣ-ತತ್ವಶಾಸ್ತ್ರಗಳವರೆಗೂ ವಿಸ್ತರಿಸಿಕೊಂಡಿರುತ್ತವೆ. ಇಂಥ ಕೆಲವು ಸಂಪ್ರದಾಯಗಳ ಜೊತೆಗಿನ ನಮ್ಮ ಬಗೆಬಗೆಯ ಒಡನಾಟಗಳನ್ನು ಅವಲೋಕಿಸುವುದು ಮತ್ತು ಪರಿಶೀಲಿಸುವುದು ಈ ಶಿಬಿರದ ಸ್ಥೂಲವಾದ ಕಾರ್ಯಸೂಚಿ.

ಈ ವಿಷಯಕ್ಕೆ ಸಂಬಂಧಿಸಿ, ಹಲವು ಉಪನ್ಯಾಸ-ಚರ್ಚೆಗಳು ಈ ಶಿಬಿರದುದ್ದಕ್ಕೂ ನಡೆಯಲಿದ್ದು, ಡಾ. ಯು.ಆರ್. ಅನಂತಮೂರ್ತಿ, ಡಾ. ಚಂದ್ರಶೇಖರ ಕಂಬಾರ, ಶ್ರೀ ಮನು ಚಕ್ರವರ್ತಿ, ಡಾ. ಪೌಲಾ ರಿಚ್‌ಮನ್, ಶ್ರೀ ಸಮೀಕ್ ಬ್ಯಾನರ್ಜಿ, ಶ್ರೀ ಶಿವ ವಿಶ್ವನಾಥನ್, ಶ್ರೀ ಎಚ್.ಎಸ್. ವೆಂಕಟೇಶಮೂರ್ತಿ, ಶ್ರೀ ಅತುಲ್ ತಿವಾರಿ, ಡಾ. ಗೋಪಾಲ ಗುರು, ಡಾ. ಮೋಹನದಾಸ ಪೈ, ಶ್ರೀ ಸುಂದರ ಸಾರುಕ್ಕೈ, ಶ್ರೀ ಗಿರಡ್ಡಿ ಗೋವಿಂದರಾಜ, ಶ್ರೀ ಕೃಷ್ಣಮೂರ್ತಿ ಹನೂರು, ಶ್ರೀಮತಿ ಸುದೇಷ್ಣಾ ಬ್ಯಾನರ್ಜಿ, ಶ್ರೀಮತಿ ರಜನಿ ಭಕ್ಷಿ, ಶ್ರೀ ಗಣೇಶ್ ದೇವಿ, ಶ್ರೀ ಪಾದೇಕಲ್ಲು ವಿಷ್ಣುಭಟ್ಟ, ಶ್ರೀ ಲಕ್ಷ್ಮೀಶ ತೋಳ್ಪಾಡಿ, ಶ್ರೀ ಎಂ.ಎಸ್. ಶ್ರೀರಾಮ್ ಮೊದಲಾದವರು ಈ ಗೋಷ್ಠಿಗಳಲ್ಲಿ ಭಾಗವಹಿಸಲಿದ್ದಾರೆ.

ಚಿತ್ರಗ್ರಾಹಕರಾದ ಶ್ರೀ ಕೆ. ಎಸ್. ರಾಜಾರಾಮ್, ಶ್ರೀ ಎ.ಎನ್. ಮುಕುಂದ್ ಅವರ ನೇತೃತ್ವದಲ್ಲಿ ಒಂದು ಫೋಟೋ ಪ್ರದರ್ಶನ ಕೂಡಾ ಪ್ರತಿದಿನ ಸಂಜೆ ನಡೆಯಲಿದೆ. ಜತೆಗೆ, ಈ ಬಾರಿ ಶ್ರೀ ಚನ್ನಕೇಶವ ಮೊದಲಾದವರು ರಂಗಕಲೆ ಕುರಿತು ಹಾಗೂ ಶ್ರೀ ಕೆ.ಎಸ್. ರಾಜಾರಾಮ್, ಶ್ರೀ ಎ.ಎನ್. ಮುಕುಂದ್ ಮೊದಲಾದವರು ಛಾಯಾಗ್ರಹಣ ಕುರಿತು ಮುಂಜಾವಿನ ತರಗತಿಗಳನ್ನು ನಡೆಸಲಿದ್ದಾರೆ.

ಇವುಗಳಲ್ಲದೆ, ಸಂಜೆಯ ಸಾಂಸ್ಕೃತಿಕ ಉತ್ಸವದ ವಿವರಗಳು ಮುಂದಿನ ಪುಟಗಳಲ್ಲಿವೆ. ಇನ್ನು, ಪ್ರತಿವರ್ಷದಂತೆಯೇ ಶಿಬಿರದ ಹಗಲಿನ ಕಾರ್ಯಕ್ರಮಗಳ ಭಾಗವಾಗಿ ಕಾವ್ಯ-ನಾಟಕ-ಚಲನಚಿತ್ರ ಮಾಧ್ಯಮದ ಕೆಲವು ಪ್ರಾತ್ಯಕ್ಷಿಕೆಗಳು ಮತ್ತು ಪ್ರದರ್ಶನಗಳು ಕೂಡಾ ನಡೆಯಲಿದ್ದು ಅದರ ವಿವರಗಳೂ ಈ ಪುಸ್ತಿಕೆಯ ಕಡೆಯ ಪುಟದಲ್ಲಿವೆ.

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

not to be printed
↓
3rd Cover

## NINASAM
## CULTURE COURSE 2013

The Culture Course has been one of Ninasam's major annual events for the last 25 plus years. Held over 7 days every October, The Course is designed around a specific theme (this year, *Living with Traditions*), and organised as a combination of special lectures, lecture-demonstration-discussions on appreciation of art forms during the day-sessions, and a series of cultural programmes in the evenings. The evening festival this year consists of the following programmes:

- **13th October, Sunday:** Ninasam Tirugata Performance - ***Seeta Swayamvara;*** Kannada play by ML Srikantesha Gowda, Directed by Manjunatha L. Badiger
- **14th October, Monday:** Ninasam Tirugata Performance - ***Gandhi Viruddha Gandhi;*** translation of the Marathi play by DS Chougale, Directed by Ganesh M.
- **15th October, Tuesday:** Ninasam Play - ***Jugari Cross;*** Adaptation of Poornachandra Tejaswi's Kannada novel; Directed by Nataraja Honnavalli.
- **16th October, Wednesday:** Invited theatre performance ***Stories in a Song*****,** by Arpana, Mumbai; Dir. by Sunil Shanbhag.
- **17th October, Thursday:** Hindustani Music Recital by **Pt. Shounak Abhisheki.**
- **18th October, Friday:** Karnatak Music Recital by **Vid. Ramakrishnan Murthy.**
- **19th October, Saturday:** Odissi dance performance by **Vid. Sarita Mishra,** and her group Adyasha Odissi Ensemble, Bangalore.

**Ninasam, Heggodu, Sagara**
**Karnataka 577 417**

not to be printed

Page 1

ಅಕ್ಟೋಬರ್ ೧೩ ಭಾನುವಾರ

photo to be printed here
see cd for the photo with this file no.

**13CC13**

ತಿರುಗಾಟ ನಾಟಕ

## ಸೀತಾ ಸ್ವಯಂವರ

ಎಂ.ಎಲ್. ಶ್ರೀಕಂಠೇಶ ಗೌಡ ಅವರ ಕನ್ನಡ ನಾಟಕ

**ನಿರ್ದೇಶನಃ ಮಂಜುನಾಥ ಎಲ್. ಬಡಿಗೇರ**

ಆಧುನಿಕ ಕನ್ನಡ ಸಾಹಿತ್ಯದ ಆರಂಭಕಾಲದಲ್ಲಿ ಸೃಜನಶೀಲ ಬರಹ ಮತ್ತು ರೂಪಾಂತರ-ಅನುವಾದಗಳ ಮುಖಾಂತರ ಮಹತ್ತ್ವದ ಕೆಲಸ ಮಾಡಿದ ಲೇಖಕ ಎಂ.ಎಲ್. ಶ್ರೀಕಂಠೇಶ ಗೌಡರು. ೧೯ನೆಯ ಶತಮಾನದ ಆರಂಭದಲ್ಲಿ ಅವರಿಂದ ರಚಿತವಾದ ಈ ಕೃತಿಯು ಪ್ರಹಸನ ಮತ್ತು ನಾಟಕೀಯ ಗುಣಗಳಿಂದ ಕೂಡಿದ ರಾಮಾಯಣದ ವಿಶಿಷ್ಟ ರೂಪಾಂತರ.

ಈ ರೂಪಾಂತರದಲ್ಲಿ, ಒಂದು ಕಡೆಗೆ, ಸೀತಾ ಸ್ವಯಂವರಕ್ಕೆ ರಾಮಲಕ್ಷ್ಮಣರು ವಿಶ್ವಾಮಿತ್ರರೊಡನೆ ಮಿಥಿಲಾ ನಗರಕ್ಕೆ ಹೊರಟಿದ್ದರೆ, ಇನ್ನೊಂದೆಡೆ, ರಾವಣನು ಸೀತೆಯನ್ನು ವರಿಸುವುದಕ್ಕಾಗಿ ರಾಮನ ವೇಷಧಾರಿಯಾಗಿ ಹೋಗುವ ಉಪಾಯ ಮಾಡುತ್ತಾನೆ. ಮಿಥಿಲಾ ನಗರಕ್ಕೆ ಸಮೀಪದ ಒಂದೆಡೆ ಇವರೆಲ್ಲ ಮುಖಾಮುಖಿಯಾಗುತ್ತಾರೆ. ಅಲ್ಲಿಗೆ ಸೀತೆಯೂ ಬಂದಿದ್ದಾಳೆ, ಆಕೆ ರಾಮನಿಗಾಗಿ ಕಾಯುತ್ತ ಅವನ ಚಿತ್ರ ಬರೆಯುತ್ತಿದ್ದಾಳೆ. ಇದರ ಜತೆಗೆ, ರಾಮನನ್ನು ಮೋಸಗೊಳಿಸುವುದಕ್ಕಾಗಿ ರಾವಣನು ಸೀತಾರೂಪದ ಇನ್ನೊಂದು ಮಾಯಾವ್ಯಕ್ತಿಯನ್ನೂ ಸೃಷ್ಟಿಮಾಡಿ ಬಿಟ್ಟಿದ್ದಾನೆ. ಈ ಎಲ್ಲ ಬಿಂಬ-ಪ್ರತಿಬಿಂಬಗಳ ಕಣ್ಕಟ್ಟಿನ ನಡುವೆ ಈ ನಾಟಕವು ಮುನ್ನಡೆದು ಹಲವು ರೀತಿಯ ಪ್ರಹಸನದ ತಿರುವುಗಳನ್ನು ಪಡೆದುಕೊಳ್ಳುತ್ತದೆ. ಮತ್ತು, ಅಂತಿಮವಾಗಿ ಸೀತಾರಾಮರ ವಿವಾಹವಾಗುವುದರೊಂದಿಗೆ ಈ ಗೊಂದಲಗಳು ಮುಕ್ತಾಯಗೊಳ್ಳುತ್ತವೆ.

ರಾಮಾಯಣದ ಈ ವಿಶಿಷ್ಟ ಆಧುನಿಕ ಅವತರಣಿಕೆಯನ್ನು ಅದಕ್ಕೆ ಸರಿಹೊಂದುವ ದೇಸೀ ರಂಗಭಾಷೆಯಲ್ಲಿ ಕಟ್ಟಲು ಪ್ರಸ್ತುತ ಪ್ರಯೋಗ ಹವಣಿಸಿದೆ.

**ಸಂಜೆ ೭ ಗಂಟೆಗೆ**

not to be printed

Page 2

ಅಕ್ಟೋಬರ್ ೧೪ ಸೋಮವಾರ

photo to be printed here
see cd for the photo with this file no.

**14CC13**

ತಿರುಗಾಟ ನಾಟಕ

## ಗಾಂಧಿ ವಿರುದ್ಧ ಗಾಂಧಿ

ಅಜಿತ ದಳವಿ ಅವರ ಮರಾಠಿ ನಾಟಕದ ಅನುವಾದಃ ಡಿ.ಎಸ್. ಚೌಗಲೆ

**ನಿರ್ದೇಶನಃ ಗಣೇಶ್ ಎಂ.**

೧೯೯೬ರಲ್ಲಿ ಮರಾಠಿ ನಾಟಕಕಾರ ಅಜಿತ ದಳವಿ ಅವರು ಬರೆದ ಈ ನಾಟಕವು ಹಲವು ಭಾಷೆಗಳಿಗೆ ಅನುವಾದಗೊಂಡು ಪ್ರಯೋಗವಾಗಿದ್ದು ಸಿನೆಮಾಕ್ಕೂ ರೂಪಾಂತರಗೊಂಡಿದೆ. ಗಾಂಧಿಯ ಮೊದಲ ಮಗ ಹರಿಲಾಲನು ತನ್ನ ತಂದೆಯ ಸುತ್ತ ಬೆಳೆದುಕೊಂಡಿದ್ದ ಪ್ರಸಿದ್ಧಿಯ ಪ್ರಭಾವಳಿಯನ್ನು ವಿಶ್ಲೇಷಿಸಿ, ವಿರೋಧಿಸುವ ಕಥಾಹಂದರವನ್ನೊಳಗೊಂಡ ಈ ನಾಟಕವು ಲೋಕವಿಖ್ಯಾತ ನಾಯಕನನ್ನು ಆತನ ಕುಟುಂಬಕಥೆಯ ಮೂಲಕ ವಿಭಿನ್ನ ಕಣ್ಣುಗಳಿಂದ ನೋಡುವ ಪ್ರಯೋಗ ಮಾಡುತ್ತದೆ.

ದಕ್ಷಿಣ ಆಫ್ರಿಕಾದಲ್ಲಿ ಗಾಂಧಿಯವರು ನಡೆಸುತ್ತಿದ್ದ ಆಶ್ರಮದ ಕಾಲದಿಂದ ಮೊದಲುಗೊಳ್ಳುವ ಈ ಕಥಾನಕವು, ಅವರೊಂದಿಗೆ ಅಲ್ಲಿ ಕೆಲಸವನ್ನಾರಂಭಿಸಿದ ಹರಿಲಾಲನು ಕ್ರಮೇಣ ತನ್ನ ತಂದೆಯಿಂದ ದೂರವಾಗಿದ್ದು, ಮತ್ತು, ಸ್ವಂತ ವ್ಯಕ್ತಿತ್ವ ನಿರ್ಮಾಣಕ್ಕಾಗಿ ಭಾರತಕ್ಕೆ ಬಂದು ಇಲ್ಲಿ ಹೊಸ ಬದುಕನ್ನು ಕಟ್ಟಿಕೊಳ್ಳಲು ಹವಣಿಸಿದ್ದು, ಮತ್ತು ಅಂತಿಮವಾಗಿ ಆತ ತನ್ನ ವೈಫಲ್ಯಗಳಿಂದ ಕಟುವಾಗಿ ಗಾಂಧಿ ವಿರೋಧಿಯಾಗಿ ರೂಪುಗೊಂಡಿದ್ದು; ಮತ್ತು ಇಷ್ಟೆಲ್ಲ ಆದರೂ ಕಡೆಯವರೆಗೂ ಆತ ತಾಯಿ ಕಸ್ತೂರ್ ಬಾ ಮತ್ತು ಸ್ವತಃ ಗಾಂಧಿಯವರ ಬಗ್ಗೆಯೂ ಪ್ರೀತಿ ಉಳಿಸಿಕೊಂಡಿದ್ದು – ಈ ನಾಟಕದ ಹಿನ್ನೆಲೆಯ ಕಥಾನಕದ ಸೂತ್ರವಾಗಿದೆ.

ದೇಶಭಾಷೆಗಳಿಂದ ಸಮಕಾಲೀನ ಕೃತಿಗಳನ್ನು ಅನುವಾದಿಸಿ ಅವನ್ನು ಕನ್ನಡದಲ್ಲಿ ರಂಗಕ್ಕೆ ತರುವುದು ತಿರುಗಾಟದ ಉದ್ದೇಶಗಳಲ್ಲೊಂದಾಗಿದ್ದು, ಪ್ರಸ್ತುತ ಕೃತಿಯು ಅದೇ ಹಿನ್ನೆಲೆಯಲ್ಲಿ ಈಗ ಪ್ರಯೋಗಗೊಳ್ಳುತ್ತಿದೆ.

**ಸಂಜೆ ೭ ಗಂಟೆಗೆ**

not to be
printed

Page 3

**ಅಕ್ಟೋಬರ್ ೧೫ ಮಂಗಳವಾರ**

photo to be printed here
see cd for the photo with this file no.

# 15CC13

ನೀನಾಸಮ್ ನಾಟಕ

## ಜುಗಾರಿ ಕ್ರಾಸ್

ಪೂರ್ಣಚಂದ್ರ ತೇಜಸ್ವಿ ಅವರ ಕಾದಂಬರಿಯ ನಾಟಕರೂಪ

**ರೂಪಾಂತರ ಮತ್ತು ನಿರ್ದೇಶನ:ನಟರಾಜ ಹೊನ್ನವಳ್ಳಿ**

ಕನ್ನಡದ ಪ್ರಸಿದ್ಧ ಕಾದಂಬರಿಗಳಲ್ಲೊಂದು ಎಂದು ಪ್ರಸಿದ್ಧವಾಗಿರುವ ತೇಜಸ್ವಿಯವರ 'ಜುಗಾರಿ ಕ್ರಾಸ್' ಕೃತಿಯನ್ನು ರಂಗಕಥನವಾಗಿ ಕಟ್ಟುವ ಕ್ಲಿಷ್ಟವಾದ ಪ್ರಯೋಗವನ್ನು ಪ್ರಸ್ತುತ ರಂಗಕೃತಿಯು ಮಾಡಹೊರಟಿದೆ.

ಈ ಕಾದಂಬರಿಯ ಮುಖ್ಯ ಸಂಗತಿ ಎಂದರೆ ಮನುಷ್ಯ ಲೋಕದ ವಿದ್ಯಮಾನಗಳನ್ನೆಲ್ಲ ಲೇಖಕರು ಇಲ್ಲಿ ಒಂದು ಲೀಲೆಯಾಗಿ ನೋಡಿದ್ದಾರೆ. ಎಲ್ಲ ಘಟನೆಗಳೂ ಕೇವಲ ಇಪ್ಪತ್ನಾಲ್ಕು ಘಂಟೆಗಳ ಅವಧಿಯಲ್ಲಿ ಸಂಭವಿಸಿದ ಹಾಗೆ ಕಾಣುವ ಸಂಯೋಜನೆ; ಮೇಲುನೋಟಕ್ಕೆ ಪರಸ್ಪರ ಸಂಬಂಧವಿರದ ಹಲವು ಬಗೆಯ ಪಾತ್ರ-ಸನ್ನಿವೇಶ-ಸಂದರ್ಭಗಳು – ಆದರೆ ಇವೆಲ್ಲಕ್ಕೂ ನಮ್ಮ ಊಹೆ ತರ್ಕಗಳಿಗೂ ಮೀರಿದ ಸಂಬಂಧಗಳ ಸಾಧ್ಯತೆಗಳು; ಯಾರು ಯಾರನ್ನು ನಿಯಂತ್ರಿಸುತ್ತಿದ್ದಾರೆ? ಎಲ್ಲರನ್ನೂ ನಿಯಂತ್ರಿಸುವ ಒಬ್ಬ 'ಬಾಸ್' ಇದ್ದಾನೆಯೆ? ಈ ಎಲ್ಲ ಚಟುವಟಿಕೆಗಳ ಆದಿ ಯಾವುದು, ಅಂತ್ಯ ಯಾವ ಕಡೆಗೆ! – ಮುಂತಾದ ಅಂಶಗಳ ಕುರಿತು, ನಮಗೆ ಪರಿಚಿತವಿರುವ ಅಸ್ತಿತ್ವವಾದೀ ದೃಷ್ಟಿಕೋನವೂ ಅಲ್ಲದ, ಚಾರಿತ್ರಿಕ ದೃಷ್ಟಿಕೋನವೂ ಅಲ್ಲದ ಒಂದು ಅವಲೋಕನ ಪ್ರಸ್ತುತ ಕಾದಂಬರಿಯಲ್ಲಿ ಇದೆ. ಕಾದಂಬರಿಯ ಸ್ವಾರಸ್ಯಕರ ಕಥೆಯನ್ನು ಪ್ರಸ್ತುತಪಡಿಸುತ್ತಲೇ ಅದರ ಹಿನ್ನೆಲೆಯಲ್ಲಿರುವ ಇಂಥ ತಾತ್ತ್ವಿಕತೆಯನ್ನು ರಂಗರೂಪದಲ್ಲಿ ಪುನರ್‌ಕಥಿಸುವುದು ಹೇಗೆ ಎಂಬ ಪ್ರಯತ್ನ ಪ್ರಸ್ತುತ ಪ್ರಯೋಗದ ಹಿಂದಿದೆ.

ಹೆಗ್ಗೋಡು ಸುತ್ತಮುತ್ತಲಿನ ನೀನಾಸಮ್ ಬಳಗವು ವರ್ಷಕ್ಕೊಮ್ಮೆ ಕೂಡಿ ತಯಾರಿಸುವ ನಾಟಕಸರಣಿಯಲ್ಲಿ ಬಂದ ೨೦೧೫ರ ಪ್ರಯೋಗ ಇದು.

**ಸಂಜೆ ೭ ಗಂಟೆಗೆ**

not to be
printed

Page 4

**ಅಕ್ಟೋಬರ್ ೧೬ ಬುಧವಾರ**

photo to be printed here
see cd for the photo with this file no.

# 16CC13

ಆಹ್ವಾನಿತ ರಂಗಪ್ರಯೋಗ

## ಸ್ಟೋರೀಸ್ ಇನ್ ಎ ಸಾಂಗ್

ಮುಂಬಯಿಯ ಅರ್ಪಣಾ ತಂಡದ ಕಲಾವಿದರಿಂದ

**ನಿರ್ದೇಶನ: ಸುನೀಲ್ ಶಾನಭಾಗ್**

೧೯೮೫ರಲ್ಲಿ ಮುಂಬಯಿಯಲ್ಲಿ ಮೊದಲುಗೊಂಡ ಅರ್ಪಣಾ ತಂಡವು ಈವರೆಗೆ ಹಲವಾರು ವಿನೂತನ ರಂಗಪ್ರಯೋಗಗಳನ್ನು ಮಾಡಿದ್ದು ಅವುಗಳಲ್ಲಿ 'ಕಾಟನ್ ೫೬, ಪಾಲಿಯೆಸ್ಟರ್ ೮೪' ಮತ್ತು 'ಸೆಕ್ಸ್, ಮೊರಾಲಿಟಿ ಎಂಡ್ ಸೆನ್ಸಾರ್‌ಷಿಪ್' ಮೊದಲಾದವು ದೇಶಾದ್ಯಂತ ಪ್ರದರ್ಶನಗೊಂಡಿವೆ.

ಈ ತಂಡದ ಇತ್ತೀಚಿನ ಪ್ರಯೋಗ - 'ಸ್ಟೋರೀಸ್ ಇನ್ ಎ ಸಾಂಗ್'. ರಂಗಭೂಮಿ, ಸಾಹಿತ್ಯ ಮತ್ತು ಇತಿಹಾಸದಿಂದ ಆಯ್ದ ಸಂಗೀತ ಸೃಷ್ಟಿಯ ದೃಷ್ಟಾಂತಗಳ ಒಂದು ಸಂಕಲನದಂತಿರುವ ಈ ಸಂಗೀತಮಯ ರಂಗಪ್ರಯೋಗವು ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದು ಗೀತೆ ಸೃಷ್ಟಿಯಾದ ಹಿನ್ನೆಲೆ, ನೌಟಂಕಿ ಪ್ರಕಾರದಲ್ಲಿ ವಸಾಹತುವಿರೋಧಿ ನೆಲೆಯಿಂದ ಹುಟ್ಟುವ ಒಂದು ಹಾಡು, ಸಿನೆಮಾ ಸಂಗೀತಯೋಜಕನೊಬ್ಬ ಶಾಸ್ತ್ರೀಯ ಬಂದಿಷ್‌ನಿಂದ ಗಾನವೊಂದನ್ನು ರೂಪಿಸುವ ಕಥಾನಕ – ಮೊದಲಾದ ವಿಭಿನ್ನ ಘಟನಾವಳಿಗಳ ರಂಗ ಸಂಕಲನವಾಗಿರುವ ಈ ನಾಟಕವು ಸಂಗೀತ ಮತ್ತು ಅದರ ಪ್ರಸ್ತುತಿಗಳ ಐತಿಹಾಸಿಕ ಮತ್ತು ಕಲಾತ್ಮಕ ಕಥನವನ್ನು ಅನಾವರಣಗೊಳಿಸುತ್ತದೆ.

ಪ್ರಸಿದ್ಧ ಸಂಗೀತಗಾರರಾದ ಶುಭಾ ಮುದ್ಗಲ್ ಮತ್ತು ಅನೀಶ್ ಪ್ರಧಾನ್ ಅವರು ನಿರ್ದೇಶಕ ಸುನೀಲ್ ಶಾನಭಾಗ್ ಅವರೊಂದಿಗೆ ಕೈಗೂಡಿಸಿ ನಿರ್ಮಿಸಿರುವ ಈ ಪ್ರಯೋಗದಲ್ಲಿ ೨೦ಕ್ಕೂ ಹೆಚ್ಚು ಪ್ರಸಿದ್ಧ ನಟರು ಅಭಿನೇತ್ರಿಗಳಾಗಿ ಮತ್ತು ಸಂಗೀತಗಾರರಾಗಿ ಪಾಲ್ಗೊಂಡಿದ್ದಾರೆ.

**ಸಂಜೆ ೭ ಗಂಟೆಗೆ**

not to be printed

Page 5

**ಅಕ್ಟೋಬರ್ ೧೭ ಗುರುವಾರ**

photo to be printed here
see cd for the photo with this file no.

# 17CC13

ಹಿಂದುಸ್ತಾನಿ ಗಾಯನ

## ಪಂ। ಶೌನಕ್ ಅಭಿಷೇಕಿ

ಮತ್ತು ಸಹಕಲಾವಿದರಿಂದ

ಹಿಂದುಸ್ತಾನಿ ಸಂಗೀತದ ದಿಗ್ಗಜರಾಗಿದ್ದ ಪಂ। ಜಿತೇಂದ್ರ ಅಭಿಷೇಕಿ ಅವರ ಪುತ್ರರು ಮತ್ತು ಶಿಷ್ಯರೂ ಆದ ಪಂ। ಶೌನಕ್ ಅಭಿಷೇಕಿಯವರು ಹಿಂದುಸ್ತಾನಿಯ ಯುವಸಂಗೀತಗಾರರ ಶ್ರೇಣಿಯ ಮೇಲ್ಪಂಕ್ತಿಯಲ್ಲಿ ಕಾಣಿಸಿಕೊಳ್ಳುವವರು. ಆಗ್ರಾ ಮತ್ತು ಜೈಪುರ ಘರಾನೆಯ ಶೈಲಿಗಳನ್ನು ಮಿಳಿತಗೊಳಿಸಿಕೊಂಡ ಶೌನಕ್ ಅಭಿಷೇಕಿಯವರ ಸಂಗೀತದಲ್ಲಿ ಖ್ಯಾಲ್ ಗಾಯನವೇ ಅಲ್ಲದೆ ಅಭಂಗ ಮತ್ತು ನಾಟ್ಯಸಂಗೀತ ಮೊದಲಾದ ಪ್ರಕಾರಗಳೂ ಕೂಡಾ ಸೇರಿಕೊಂಡಿವೆ. ತಮ್ಮ ತಂದೆ ಜಿತೇಂದ್ರ ಅಭಿಷೇಕಿಯವರು ಸಂಗೀತ ಸಂಯೋಜಿಸಿದ ಹಲವು ಕೃತಿಗಳನ್ನು ಕೂಡಾ ಇವರು ತಮ್ಮದೇ ಶೈಲಿಯಲ್ಲಿ ಹೊಸ ರೂಪದೊಡನೆ ಪ್ರಸ್ತುತಿಗೊಳಿಸಿದ್ದಾರೆ.

ಭಾರತದ ಬಹುತೇಕ ಪ್ರಸಿದ್ಧ ಸಂಗೀತೋತ್ಸವಗಳಲ್ಲಿ ಹಾಡಿ ಪ್ರಖ್ಯಾತರಾಗಿರುವ ಶೌನಕ್ ಅಭಿಷೇಕಿ ಅವರು ಅಮೇರಿಕಾ, ಇಂಗ್ಲೆಂಡ್, ರಷಿಯಾಗಳಲ್ಲೇ ಅಲ್ಲದೆ ಹಲವು ಐರೋಪ್ಯ ಮತ್ತು ಗಲ್ಫ್ ದೇಶಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಅವರಿಗೆ ಅನೇಕ ಗೌರವಗಳು ಸಂದಿವೆ – ಬಾಲಗಂಧರ್ವ ಪುರಸ್ಕಾರ, ದೀನಾನಾಥ ಮಂಗೇಶ್ಕರ್ ಪುರಸ್ಕಾರ, ಪುಣೆಯ ಆಶಾ ಪುರಸ್ಕರ ಮತ್ತು ಪಂ। ರಾಮ ಮರಾಠೆ ಪ್ರಶಸ್ತಿ ಅದರಲ್ಲಿ ಮುಖ್ಯವಾದವು. ಶಾಸ್ತ್ರೀಯ ಸಂಗೀತ ಕ್ಷೇತ್ರದ ಚಟುವಟಿಕೆಗಳಿಗಾಗಿ ಅವರು ತರಂಗಿಣಿ ಸಂಗೀತ ಪ್ರತಿಷ್ಠಾನ ಎಂಬ ಸಂಸ್ಥೆಯನ್ನು ಕೂಡಾ ನಡೆಸುತ್ತಿದ್ದಾರೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಹಕಲಾವಿದರು – ಶ್ರೀ ಉದಯ ಕುಲಕರ್ಣಿ (ಹಾರ್ಮೋನಿಯಮ್), ಶ್ರೀ ರಂಗ ಪೈ (ತಬಲಾ).

**ಸಂಜೆ ೭ ಗಂಟೆಗೆ**

not to be printed

Page 6

**ಅಕ್ಟೋಬರ್ ೧೮ ಶುಕ್ರವಾರ**

photo to be printed here
see cd for the photo with this file no.

# 18CC13

ಕರ್ನಾಟಕ ಸಂಗೀತ ಗಾಯನ

## ವಿ। ರಾಮಕೃಷ್ಣನ್ ಮೂರ್ತಿ

ಮತ್ತು ಸಹಕಲಾವಿದರಿಂದ

ಕರ್ನಾಟಕ ಸಂಗೀತದಲ್ಲಿ ಈಚೆಗೆ ಯುವ ಗಾಯಕರ ಒಂದು ಹೊಸ ಅಲೆಯೇ ಕಾಣಿಸಿಕೊಳ್ಳುತ್ತಿದ್ದು, ಅವರಲ್ಲಿ ಪ್ರಮುಖರಾದ ಒಬ್ಬರು – ವಿ। ರಾಮಕೃಷ್ಣನ್ ಮೂರ್ತಿ. ೧೯೯೭ರಲ್ಲಿ ಶ್ರೀಮತಿ ಪದ್ಮಾ ಕುಟ್ಟಿ ಅವರಿಂದ ಸಂಗೀತಾಭ್ಯಾಸವನ್ನು ಆರಂಭಿಸಿದ ರಾಮಕೃಷ್ಣನ್ ಮೂರ್ತಿ ಅವರು, ೨೦೦೧ರಿಂದ ದೆಹಲಿಯ ಗುರು ವಿ। ಸೌಂದರರಾಜನ್ ಅವರ ಶಿಷ್ಯರಾಗಿ ಅಭ್ಯಾಸ ನಡೆಸಿದ್ದಾರೆ. ತಮ್ಮ ಅಭ್ಯಾಸ ಕಾಲದ ಬೇರೆಬೇರೆ ಅವಧಿಗಳಲ್ಲಿ ಅವರು ಹಲವು ಖ್ಯಾತನಾಮರಿಂದ ತರಬೇತಿ ಪಡೆದಿದ್ದಾರೆ – ಗುರು ವಿ। ವೈರಮಂಗಳಮ್ ಲಕ್ಷ್ಮೀನಾರಾಯಣನ್, ವಿ। ಚೆಂಗಲ್‌ಪೇಟೆ ರಂಗ ನಾಥನ್, ವಿ। ಪಳಾಯಿ ರಾಮಚಂದ್ರನ್, ವಿ। ಸಿ.ಆರ್. ವೈದ್ಯನಾಥನ್ ಮತ್ತು ವೈಕ್ಕಂ ಟಿ.ವಿ. ಜಯಚಂದ್ರನ್ -- ಅವರೆಲ್ಲ ರಾಮಕೃಷ್ಣ ಮೂರ್ತಿಯವರಿಗೆ ಸಂಗೀತ ಮಾರ್ಗದರ್ಶಕರಾಗಿ ಒದಗಿಬಂದಿದ್ದಾರೆ.

ಈಗಾಗಲೇ ದೇಶಾದ್ಯಂತ ಮತ್ತು ಹೊರಗೆ ಅನೇಕ ಕಾರ್ಯಕ್ರಮಗಳನ್ನು ನೀಡಿ ಪ್ರಸಿದ್ಧರಾಗಿರುವ ರಾಮಕೃಷ್ಣನ್ ಮೂರ್ತಿ ಅವರಿಗೆ ಹಲವು ಪುರಸ್ಕಾರಗಳು ಸಿಕ್ಕಿವೆ – ಅವರು ಚೆನ್ನೈನ ಮ್ಯೂಸಿಕ್ ಅಕಾಡೆಮಿಯಿಂದ ೨೦೧೧ ಮತ್ತು ೧೨ರಲ್ಲಿ ಅಪ್ರತಿಮ ಯುವಕಲಾವಿದರೆಂಬ ಮನ್ನಣೆ ಗಳಿಸಿದ್ದಾರೆ; ಆಕಾಶವಾಣಿಯು ನಡೆಸುವ ರಾಷ್ಟ್ರೀಯ ಶಾಸ್ತ್ರೀಯ ಕರ್ನಾಟಕ ಸಂಗೀತ ಸ್ಪರ್ಧೆಯಲ್ಲಿ ೨೦೦೯ರ ವರ್ಷ ಪ್ರಥಮ ಬಹುಮಾನ ಗಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಸಹಕಲಾವಿದರು – ಶ್ರೀ ಮತ್ತೂರು ಶ್ರೀನಿಧಿ (ವಯೋಲಿನ್), ಶ್ರೀ ಎಚ್.ಎಸ್. ಸುಧೀಂದ್ರ (ಮೃದಂಗಮ್).

**ಸಂಜೆ ೭ ಗಂಟೆಗೆ**

not to be printed

Page 7

## ಅಕ್ಟೋಬರ್ ೧೯ ಶನಿವಾರ

photo to be printed here
see cd for the photo with this file no.

**19CC13**

ಶಾಸ್ತ್ರೀಯ ಒಡಿಸ್ಸಿ ನೃತ್ಯ

### ವಿ। ಸರಿತಾ ಮಿಶ್ರಾ

ಮತ್ತು ಬೆಂಗಳೂರಿನ ಅದ್ಯಶ ತಂಡದ ಕಲಾವಿದರಿಂದ

ಮೂರು ವರ್ಷಗಳ ಹಿಂದೆ, ಬೆಂಗಳೂರಿನಲ್ಲಿ ಆರಂಭವಾದ ಅದ್ಯಶ ಒಡಿಸ್ಸಿ ನೃತ್ಯ ಶಾಲೆಯು ಶಾಸ್ತ್ರೀಯ ಒಡಿಸ್ಸಿ ನೃತ್ಯವನ್ನು ಆಸಕ್ತ ವಿದ್ಯಾರ್ಥಿಗಳಿಗೆ ಕಲಿಸುವುದರ ಜೊತೆಗೆ ಅದರ ಪ್ರಯೋಗ ಮತ್ತು ಪ್ರಾತ್ಯಕ್ಷಿಕೆಗಳ ಮೂಲಕ ಈ ಪ್ರಕಾರವನ್ನು ಜನಪ್ರಿಯಗೊಳಿಸುವ ಚಟುವಟಿಕೆಯಲ್ಲಿ ತೊಡಗಿದೆ. ವಿ। ಸರಿತಾ ಮಿಶ್ರಾ ಈ ಶಾಲೆಯ ಮುಖ್ಯಸ್ಥರು ಮತ್ತು ಪ್ರಧಾನ ನರ್ತಕರು.

ಗುರು ನಿರಂಜನ ರೌತ್ ಮತ್ತು ಗುರು ಪದ್ಮ ಚರಣ ದೇಹುರಿ ಅವರಿಂದ ಮೂರನೆಯ ವಯಸ್ಸಿನಿಂದಲೇ ಒಡಿಸ್ಸಿ ನೃತ್ಯವನ್ನು ಕಲಿಯತೊಡಗಿದ ಸರಿತಾ ಮಿಶ್ರಾ ಅವರು ಮುಂದೆ ಗುರು ಬಿಚಿತ್ರಾನಂದ ಸ್ವೈನ್ ಅವರಿಂದಲೂ ಮಾರ್ಗದರ್ಶನ ಪಡೆದರು. ಒಡಿಸ್ಸಿ ನೃತ್ಯದ ಹೆಸರಾಂತ ಕಲಾವಿದ ಗುರು ಕೇಳುಚರಣ ಮೊಹಾಪಾತ್ರ ಅವರ ಶೈಲಿಯನ್ನು ತಮ್ಮ ಪ್ರಸ್ತುತಿಯಲ್ಲಿ ಒಳಗೊಳ್ಳಿಸಿಕೊಂಡಿರುವ ಸರಿತಾ ಮಿಶ್ರಾ ಅವರು ಒಡಿಸ್ಸಿಯ ಲಾಲಿತ್ಯ ಮತ್ತು ಮಾಧುರ್ಯಗಳನ್ನು ತಮ್ಮ ಏಕವ್ಯಕ್ತಿ ಪ್ರಸ್ತುತಿಯಲ್ಲಿ ಮತ್ತು ಸಮೂಹನೃತ್ಯದ ಸಂಯೋಜನೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಹಲವಾರು ಪುರಸ್ಕಾರಗಳನ್ನು ಪಡೆದಿರುವ ಅವರ ತಂಡವು ಈಗಾಗಲೇ ರಾಷ್ಟ್ರೀಯ ಮಟ್ಟದ ಹಲವು ಉತ್ಸವಗಳಲ್ಲಿ ಯಶಸ್ವಿಯಾಗಿ ಪಾಲ್ಗೊಂಡಿದೆ.

ಸರಿತಾ ಮಿಶ್ರಾ ಅವರೊಂದಿಗೆ ಅವರ ತಂಡದ ಹಲವು ಜನ ನೃತ್ಯ ಕಲಾವಿದರು ಪಾಲ್ಗೊಳ್ಳುವ ಈ ಕಾರ್ಯಕ್ರಮದಲ್ಲಿ ಒಡಿಸ್ಸಿ ಸಾಂಪ್ರದಾಯಿಕ ಪ್ರಯೋಗದ ಈ ನೃತ್ಯಭಾಗಗಳು ಇರುತ್ತವೆ – ಮಂಗಳಾಚರಣ, ಪಲ್ಲವಿ, ಬ್ರಜ ರಾಜಕುಮಾರ, ಅಭಿನಯ ಗಂಗಾ, ಮಣಿ ಬಿಮಾನೇ ಗೋವಿಂದ.

**ಸಂಜೆ ೭ ಗಂಟೆಗೆ**

not to be printed

Page 8

## ಹಗಲಿನ ಕಿರು ಪ್ರಾತ್ಯಕ್ಷಿಕೆಗಳು

ದಿನಾಂಕ ೧೩ ಭಾನುವಾರ - ಮಧ್ಯಾಹ್ನ ೨.೩೦ಕ್ಕೆ

**ಗಮಕವಾಚನ - ರಾಮಾಯಣ ದರ್ಶನಂ**
ಪದ್ಮಜಾ ಶೇಷಗಿರಿ ರಾವ್ ಮತ್ತು ಎಂ.ಎಸ್. ವಿನಾಯಕ
ಅವರಿಂದ

ದಿನಾಂಕ ೧೪ ಸೋಮವಾರ - ಮಧ್ಯಾಹ್ನ ೨.೩೦ಕ್ಕೆ

**ಜೋಗೇರ ಆಟ**
ಗುಡ್ಡಪ್ಪ ಜೋಗಿ ಮತ್ತು ಸಹಕಲಾವಿದರು
ಅವರಿಂದ

ದಿನಾಂಕ ೧೫ ಮಂಗಳವಾರ - ಮಧ್ಯಾಹ್ನ ೨.೩೦ಕ್ಕೆ

**ಮಾಸ್ತಿ ಕಥಾ ಪ್ರಸ್ತುತಿ - ಆಂಗ್ಲ ನೌಕಾ ಕ್ಯಾಪ್ಟನ್**
ಮಂಜು ಕೊಡಗು ಮತ್ತು ಗಣೇಶ್ ಎಂ.
ಅವರಿಂದ

ದಿನಾಂಕ ೧೬ ಬುಧವಾರ - ಮಧ್ಯಾಹ್ನ ೨.೩೦ಕ್ಕೆ

**ತಾಳಮದ್ದಲೆ - ಕರ್ಣಭೇದನ**
ಪ್ರಭಾಕರ ಜೋಷಿ ಮತ್ತು ಉಮಾಕಾಂತ ಭಟ್
ಅವರಿಂದ

ದಿನಾಂಕ ೧೭ ಗುರುವಾರ - ಮಧ್ಯಾಹ್ನ ೨.೩೦ಕ್ಕೆ

**ಪುರುಷಸೂಕ್ತ - ರಂಗಪ್ರಯೋಗ**
ಅಭಿಜ್ಞಾನ, ಬೆಂಗಳೂರು
(ನಿ: ಜೆ. ಶ್ರೀನಿವಾಸಮೂರ್ತಿ)
ಅವರಿಂದ

ದಿನಾಂಕ ೧೯ ಶನಿವಾರ - ಬೆಳಿಗ್ಗೆ ೯.೩೦ಕ್ಕೆ

**ಸಂಗೀತ ಪ್ರಾತ್ಯಕ್ಷಿಕೆ**
ವಿ। ರಾಮಕೃಷ್ಣನ್ ಮೂರ್ತಿ
ಅವರಿಂದ

**ಈ ಕಾರ್ಯಕ್ರಮಗಳು ಶಿಬಿರದ ಉಪನ್ಯಾಸಗಳಿಗೆ ಪೂರಕವಾಗಿ ಏರ್ಪಾಟಾಗಿರುವ ಪ್ರಾತ್ಯಕ್ಷಿಕೆಗಳಾಗಿರುವುದರಿಂದ ಅದರ ದಿನಾಂಕ ಮತ್ತು ಸಮಯದಲ್ಲಿ ಬದಲಾವಣೆ ಆಗುವ ಸಾಧ್ಯತೆ ಇರುತ್ತದೆ; ಪ್ರವೇಶಾವಕಾಶ ಸೀಮಿತ.**